## 25. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇಂಡುವಳ್ಳಿ.

### 01 ಶಾಲಾ ಹಿನ್ನಲೆ :

ಸುರಭಿಪುರದ ಸೊಬಗಿನಲ್ಲಿ ಅರಳಿದ ಪರಿಸರ ಸ್ನೇಹಿ ಶಾಲೆ ನಮ್ಮ ಶಾಲೆ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ಇಂಡುವಳ್ಳಿ 1944 ರಲ್ಲಿ 400 ಮಕ್ಕಳಿಂದ ಪ್ರಾರಂಭವಾಗಿ ಇಲ್ಲಿಯವರೆಗೆ ಸುಂದರ ಶಾಲೆಯಾಗಿ ಹೊರಹೊಮ್ಮಿದೆ ಇದು 72 ವರ್ಷ ಪೂರೈಸಿ ಶತಮಾನದ ಶಾಲೆಯಾಗಲು ಸನಿಹದಲ್ಲಿದೆ

ನಮ್ಮ ಗ್ರಾಮದಲ್ಲಿ ಸ್ವತಂತ್ರ ಹೋರಟಗಾರರು ಇದ್ದು ಶಾಲೆಯು ಸ್ವಾತಂತ್ರ್ಯ ಪೂರ್ವದಲ್ಲಿಯೇ ಪ್ರಾರಂಭವಾಗಿ ನಾವೀನ್ಯತೆಯನ್ನು ಹೊಂದಿದೆ 2 ಅಂಗನವಾಡಿ,ಮಲೆನಾಡು ಪ್ರೌಢಶಾಲೆ ಹಾಗೂ ಹಿರಿಯ ಪ್ರಾಥಮಿಕ ಶಾಲೆ,ಗ್ರಾಮ ಪಂಚಾಯತಿ ಹೊಂದಿದ್ದು ಜನರಿಗೆ ಸೇವೆ ಒದಗಿಸುತ್ತಿದೆ,

ಶಾಲೆಯು ಉತ್ತಮ ಪಾರ್ಕ ಹೊಂದಿದ್ದು ಸುತ್ತಲು ಹಚ್ಚ ಹಸಿರುನಿಂದ ಕಂಗೊಳಿಸುತ್ತಿದೆ ಶಾಲೆಯು ಕಲಿಕೆಗೆ ಮಕ್ಕಳನ್ನು ಕೈಬೀಸಿ ಕರೆಯುತ್ತಿದ್ದು 81 ಮಕ್ಕಳು ಕಲಿಕೆಯಲ್ಲಿ ನಿರತರಾಗಿದ್ದು 5 ಶಿಕ್ಷಕರನ್ನು ಹೊಂದಿದೆ,

### 02 ಶಾಲೆಯಲ್ಲಿ ಕೈಗೊಂಡ ನಾವಿನ್ಯಯುತ ಚಟುವಟಿಕೆಗಳು.

- ಶಾಲೆಯಲ್ಲಿ ಸುಂದರ ಪಾರ್ಕ ನಿರ್ಮಾಣ.
- ಕಸದಿಂದ ರಸ
- ಆಟದ ಮೈದಾನ
- ತರಕಾರಿ ಚಪ್ಪರ
- ಸುಂದರ ನಲಿ–ಕಲಿ ಕೊಠಡಿ
- ರಸ ಪ್ರಶ್ನೆ,ಚರ್ಚಾಸ್ಪರ್ದೆ,ಪ್ರಬಂಧ,ಮಗ್ಗಿ–ಸುಗ್ಗಿ,ಇಂಗ್ಲೀಷ್ ಚಟುವಟಿಕೆ (ವಾರಕ್ಕೊಮ್ಮೆ)

### 03. ಆರಂಭದಲ್ಲಿ ನಾವು ಎದುರುಸಿದ ಸಮಸ್ಯೆಗಳು.

- ಗ್ರಾಮೀಣ ಪ್ರದೇಶವಾಗಿದ್ದು ರೈತ ಕುಟುಂಬಗಳು ಹೆಚ್ಚಾಗಿ ಇರುವುದು ಹೆಚ್ಚಾಗಿ ಪಾಲಕರು ಭಾಗವಹಿಸದಿರುವುದು.
- ಪಾಲಕರು ಹೆಚ್ಚಾಗಿ ಅನಕ್ಷರಸ್ಥರಾಗಿದ್ದು ಮಕ್ಕಳ ಕಲಿಕೆಯ ಬಗ್ಗೆ ನಿರಾಸಕ್ತಿ ಹೊಂದಿರುವುದು.
- ಶಿಕ್ಷಕರ ಸಂಖ್ಯೆ ಕಡಿಮೆ.
- ಮಕ್ಕಳ ಸತತ ಗೈರು ಹಾಜರಿ.
- ಮಕ್ಕಳ ಅನಾರೋಗ್ಯ

- ಭೌತಿಕ ಸೌಲಭ್ಯಗಳ ಕೊರತೆ.
- ಆರ್ಥಿಕ ಸಹಾಯ ಇಲ್ಲದಿರುವುದು.

## 04 ಪರಿಹಾರಕ್ಕೆ ನಾವು ಕೈಗೊಂಡ ಕ್ರಮಗಳು.

- ಮನೆ ಮನೆ ಬೇಟಿ ನೀಡಿ ಅಲ್ಲಿ ಪಾಲಕರ ಜೊತೆ ಚರ್ಚಿಸಿ ಶಿಕ್ಷಣದ ಬಗ್ಗೆ ಒಲವು ಮೂಡಿಸಲಾಗಿದೆ.
- ರೈತರು ಸಾಯಂಕಾಲ ಮನೆಗೆ ಬಂದ ನಂತರ ಅವರನ್ನು ಭೇಟಿ ಮಾಡಿ ಶಾಲೆಯ ಬಗ್ಗೆ ಪ್ರಜ್ಞೆ ಮೂಡಿಸಲಾಗಿದೆ.
- ಪಾಲಕರಿಗೆ ತಮ್ಮ ಮಕ್ಕಳ ಮೂಲಕ ಶಿಕ್ಷಣ ನೀಡಿಸಿದೆವು.
- ಹೆಚ್ಚು ಹೆಚ್ಚು ಶಿಕ್ಷಕರನ್ನು ನೇಮಿಸಿಕೊಳ್ಳಲಾಯಿತು.
- ಗೈರು ಆದ ಮಕ್ಕಳ ಮನೆಗೆ ಭೇಟಿ.
- ಆನಾರೋಗ್ಯ ಮಕ್ಕಳ ವೈದ್ಯರಿಂದ ಚಿಕಿತ್ಸೆ.
- ಭೌತಿಕ ಸೌಲಭ್ಯಗಳ ನೀಡಿಕೆ.
- ಶಾಲೆಗೆ ಸರ್ಕಾರದಿಂದ ಧನಸಹಾಯ.
- ಸುಂದರ ನಲಿ–ಕಲಿ ಕೊಠಡಿ ನಿರ್ಮಾಣ

## 05. ದಾನಿಗಳು.

- ದಿ.ಚಂದ್ರಶೇಖರಪ್ಪ ಗೌಡ್ರು : ಭೂದಾನಿಗಳು
- ದಿ.ಈರಪ್ಪ ಕಬ್ಬೂರು : ಗೇಟ್ ದಾನಿಗಳು
- ಶಿಕ್ಷಕರು : ಶ್ರೀಧರ್ ಕೆ ಎಸ್ ಮು.ಗು ಮಲ್ಲಿಕಾರ್ಜುನ ಬಿ ಸ.ಶಿ ಸಾಬ್‌ಜಾನ್‌ಸಾಬ್ ಹೆಚ್ ಎಲ್ ಸ.ಶಿ ಗ್ರೇಸಿರಸ್ಕೀನಾ ಸ.ಶಿ ಚಂದ್ರಶೇಖರಪ್ಪ ಜೆ ಸ.ಶಿ ಶೇಖರಪ್ಪ ಬಿ :

ಊಟದ ತಟ್ಟೆಗಳು

- ಪ್ರಗತಿ ಕೃಷ್ಣ ಬ್ಯಾಂಕ್ :ನೀರಿನ ಡ್ರಮ್ ಮತ್ತು ಲೋಟಗಳು.
- ರಾಣೆಬೇನ್ನೂರು ರಾಮಪ್ಪ ಹೊಸಮನಿ : ನೀರು ಎತ್ತುವ ಮೋಟಾರ್.
- ಊರಿನ ಜನರು : ಗೋಡೆ ಬರಹ
- ಪಾಲಕರು ಶಿಕ್ಷಕರು ಮತ್ತು ವಿದ್ಯಾರ್ಥಿಗಳು : ಪಾರ್ಕ ನಿರ್ಮಾಣ

## 06 ವಿಶೇಷ ಅಂಶಗಳು.

ನಮ್ಮ ಶಾಲೆ 2015–16ನೇ ಸಾಲಿನಲ್ಲಿ ಪರಿಸರ ಮಿತ್ರ ಹಳದಿ ಪ್ರಶಸ್ತಿ,2016–17ನೇ ಸಾಲಿನಲ್ಲಿ ಹಸಿರು ಶಾಲೆ ಪ್ರಶಸ್ತಿ, 2017–18ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಿಂದ ಬೆಂಗಳೂರು ವಿಭಾಗ ಮಟ್ಟಕ್ಕೆ ಮಲೆನಾಡ ಗಾಂಧಿ ಶ್ರೀ ಗೊವಿಂದೆಗೌಡ ಉತ್ತಮ ಶಾಲೆಗೆ ಆಯ್ಕೆಯಾಗಿದೆ,2017–18ನೇ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಮತ್ತು ಪ್ರತಿಭಾಕಾರಂಜಿಯಲ್ಲಿ ಅತೀ ಹೆಚ್ಚು ಬಹುಮಾನಗಳನ್ನು ಪಡೆದುಕೊಂಡ ಶಾಲೆ ಎಂದು ಹೇಳಲು ಖುಷಿ ಎನ್ನಿಸಿದ್ದು ಉತ್ತಮ ಪಾರ್ಕ,ಗ್ರಂಥಾಲಯ,ಉತ್ತಮ ಕಲಿಕೆ ನಮ್ಮಲ್ಲಿದೆ ಎಂದು ಹೇಳಲು ನಮಗೆ ಹೆಮ್ಮೆ ಎನಿಸುತ್ತದೆ.



ಆವರೆ ಚಪ್ಪರದ ಸ್ವಾಗತ



ತೂಗು ಪಾಟ್



ದಾಸವಾಳದ ಹೂ ತೋಟ



ಶಾಲೆಯ ಹುಲ್ಲು ಹಾಸು



ಹಸಿರು ಬದ



ಗುಟ್ಕಾ ರಾಕ್ಷಸ